ಅರ್ಥವಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯಿಂದ ಮಾಡನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅವರು ಈ ಮಾತನ್ನು ಏತಕ್ಕೆ ಹೇಳಿದರೋ ಗೊತ್ತಿಲ್ಲ. ಅವರು ಏತಕ್ಕೆ ಹಗರಣ ಮಾಡಿದರೋ ಗೊತ್ತಿಲ್ಲ

ಶ್ರೀ ಡಿ. ಜಿ, ಬಸವನಗೌಡ.—ಅವರು ಒಂದು ಉದಾಹರಣೆ ಕೊಟ್ಟರು ಅಷ್ಟೆ. ಹಗರಣ ಮಾಡಲಿಲ್ಲ.

ಅಧ್ಯಕ್ಷರು.—ಈ ವಿಷಯವನ್ನು ಇಲ್ಲಿಗೇ ಮುಗಿಸೋಣ. ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಪ್ರಭಾವಯುತ ವ್ಯಕ್ತಿ ಯಾರು ಇದ್ದಾರೆ ಅವರ ಹೆಸರನ್ನು ಏತಕ್ಕೆ ಮುಚ್ಚಿಟ್ಟಿದ್ದಾರೋ ಗೊತ್ತಿಲ್ಲ. ಇದರ ಬಗ್ಗೆ ಸರ್ಕಾರದ ನೀತಿ ಏನು ? ನಾವು ಎಷ್ಟೇ ಹೇಳಿದರೂಕೂಡ ಇದನ್ನು ಸಿ.ಬಿ.ಐ.ಗೆ ವಹಿಸುವುದಿಲ್ಲ ಎಂದು ಹೇಳಿರುವುದರಿಂದ ನಾವು ಇದನ್ನು ಪ್ರತಿಭಟಿಸಲೇ ಬೇಕಾಗುತ್ತದೆ. ಸರ್ಕಾರದ ಈ ನೀತಿಯನ್ನು ನಾವು ಸಂಪೂರ್ಣವಾಗಿ ಪ್ರತಿಭಟಿಸುತ್ತೇನೆ.

ಅಧ್ಯಕ್ಷರು.—ನನ್ನ ಪರ್ಮಿಷನ್ ಇಲ್ಲದೆ ಯಾರಾದರೂ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ವಿಷಯ ಏನು ಇದೆ ಹೇಳಿ.

ನಿಯಮ 334ರ ಮೇರೆಗೆ

(1) ವಿಷಯ.—ಶಿವಮೊಗ್ಗ ಜಿಲ್ಲೆಗೆ ಸಕ್ಕರೆ ವಿತರಣೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆ ಮೂಲಕ ಸಕ್ಕರೆ ಏನು ಬಿಡುಗಡೆ ಮಾಡಬೇಕಾಗಿತ್ತು ಅದು ಬಿಡುಗಡೆಯಾಗದೇ ಇರುವುದರಿಂದ ಅಲ್ಲಿನ ಗ್ರಾಮಾಂತರದ ಪ್ರದೇಶದ ಜನರಿಗೆ ಒಂದು ಲೋಟ ಚಹಾ ಕುಡಿಯುವುದಕ್ಕೂ ಕೂಡ ಕಷ್ಟವಾಗಿದೆ. ಗ್ರಾಮಾಂತರ ಪ್ರದೇಶದ ಜನರಿಗೆ ಇಂಥಾ ಪರಿಸ್ಥಿತಿ ಒದಗಿ ಬಂದಿದೆ. ಜುಲೈ 20ಕ್ಕೆ ಬಂದರೂ ಕೂಡ ಇನ್ನೂ ಆ ಶಿವಮೊಗ್ಗ ಜಿಲ್ಲೆಗೆ ಸಕ್ಕರೆ ವಿತರಣೆಯಾಗಿಲ್ಲ.

ಅಧ್ಯಕ್ಷರು.—ತಾವು ಈ ನೋಟೀಸ್‌ನಲ್ಲಿ ಏನು ಇದೆ ಅದನ್ನು ಮೊದಲು ಓದಿ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನೋಟೀಸ್ ಏನು ಕೊಟ್ಟಿದ್ದೇನೆ ಅದರಲ್ಲಿರುವ ವಿಷಯವನ್ನೇ ಹೇಳುತ್ತಿದ್ದೇನೆ. ಶಿವಮೊಗ್ಗ ಜಿಲ್ಲೆಗೆ ಬೆಳಗಾಂ ಜಿಲ್ಲೆಯ ಒಂದು ಸಕ್ಕರೆ ಕಾರ್ಖಾನೆಯಿಂದ ಸಕ್ಕರೆ ಏನು ಸಪ್ಲೈ ಆಗಬೇಕಾಗಿತ್ತೋ ಇದುವರೆಗೂ ಅದು ಸಪ್ಲೈ ಆಗಿಲ್ಲ. ಈಗ ಏಜೆಂಟರಿಗೆ ಅಲ್ಲಿಂದ ಸಕ್ಕರೆ ತೆಗೆದುಕೊಂಡು ಹೋಗಿ ಬನ್ನಿ ಎಂದು ನೋಟೀಸ್ ಕೊಟ್ಟಿದ್ದಾರೆ. ಅವರು ಹೇಳಿದರೂ ಬರುತ್ತಾ ಇಲ್ಲ. ನೋಟೀಸ್ ಕೊಟ್ಟಿದ್ದಾರೆ. ಇದು ಎಂತಹ ವಿಚಿತ್ರವೋ ಗೊತ್ತಿಲ್ಲ. ಇದನ್ನು ಸರಿಮಾಡಿ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಜಿ. ಬಸವಣಪ್ಪ (ಆಹಾರ ಸಚಿವರು).—ಮಾನ್ಯ ಅಧ್ಯಕ್ಷರೆ, ಕಳೆದ ಎರಡು ತಿಂಗಳಿಂದ ಕರ್ನಾಟಕದಲ್ಲಿ ಸಕ್ಕರೆ ಬೆಲೆ ಹೆಚ್ಚಾದದ್ದು ಸರ್ಕಾರದ ಗಮನಕ್ಕೆ ಬಂದಿದೆ. ವೈಜ್ಞಾನಿಕವಾಗಿ ವಿಚಾರ ಮಾಡುವುದಾದರೆ ಸಕ್ಕರೆ ಬೆಲೆ ಹೆಚ್ಚು ಆಗಬೇಕಾದ್ದಿಲ್ಲ. ಜನತೆಯ ಅವಶ್ಯಕತೆಗೆ ಅನುಗುಣವಾಗಿ ಸಕ್ಕರೆಯನ್ನು ಸಪ್ಲೈ ಮಾಡಿದ್ದೇವೆ. ಲೆವಿ ಸಕ್ಕರೆ 16,850 ಟನ್ ಸಪ್ಲೈ ಮಾಡಿದ್ದೇವೆ. ಆಮದು ಮಾಡಿಕೊಂಡ ಸಕ್ಕರೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವ ಸಲುವಾಗಿ 6372 ಟನ್ ಸಪ್ಲೈ ಮಾಡಿದ್ದೇವೆ. 11 ಸಾವಿರ ಮೆಟ್ರಿಕ್ ಟನ್ ಸಪ್ಲೈ ಮಾಡಿದ್ದೇವೆ. ಇದು ಜನತೆಯ ಅವಶ್ಯಕತೆಗೆ ಅನುಗುಣವಾಗಿದೆ ಆದರೂ ಕೂಡ ಕಳೆದ ಎರಡು ತಿಂಗಳಿಂದ ಸಕ್ಕರೆ ಬೆಲೆ ಜಾಸ್ತಿಯಾಗಿದೆ. ಕಾಯಿದೆ ಪ್ರಕಾರ ಪರವಾನಿಗೆ ಹೊಂದಿಲ್ಲದೇ 250 ಕ್ವಿಂಟಾಲ್ ಇಟ್ಟಿರತಕ್ಕವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಲು ಆದೇಶ ಕೊಟ್ಟಿದ್ದೇವೆ. ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರ ಶುಗರ್ ಫ್ಯಾಕ್ಟರಿಗೆ ಅಲಾಟ್‌ಮಾಡಿದೆವು. ಅಲ್ಲಿ ಮುಷ್ಕರ ನಡೆದ ಕಾರಣ ಲಿಫ್ಟ್‌ಮಾಡಲಿಲ್ಲ. ನಂತರ ಉಗಾರ್ ಶುಗರ್ ಫ್ಯಾಕ್ಟರಿಗೆ ಅಲಾಟ್ ಮಾಡಿದ್ದೇವೆ. ಉಗಾರ್ ಶುಗರ್ ಫ್ಯಾಕ್ಟರಿ ಬಹಳ ದೂರವಾಗುತ್ತದೆ, ಲಿಫ್ಟ್ ಮಾಡುವುದಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಕೂಡಲೇ ಅದಕ್ಕೆ ಅಲ್ಟರ್‌ನೇಟೀವ್ ವ್ಯವಸ್ಥೆ ಮಾಡುತ್ತೇವೆ.